9. ಗಮನ ಸೆಳೆಯುವ ಸೂಚನೆಗಳು

ವಿಷಯ (ಅ) ಮಂಡ್ಯ ಜಿಲ್ಲೆಯಲ್ಲಿ ಭತ್ತದ ರೋಗ ತಗುಲಿರುವುದರಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):— ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ರೋಗ ತಗಲಿರುವುದರಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನವನ್ನು ನಾನು ಸೆಳೆಯುತ್ತೇನೆ.

+ಟಿ.ಬಿ. ಜಯಚಂದ್ರ (ಕೃಷಿ ಸಚಿವರು):— 2000ದ ಮುಂಗಾರು ಹಂಗಾಮಿನಲ್ಲಿ ಸುಮಾರು 57638 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆಯನ್ನು ಮಂಡ್ಯ ಜಿಲ್ಲೆಯಲ್ಲಿ ಬೆಳೆಯಲಾಗಿರುತ್ತದೆ. ಜಿಲ್ಲೆಯಲ್ಲಿನ ಮದ್ದೂರು ಮಳವಳ್ಳಿ, ಮತ್ತು ಮಂಡ್ಯ ತಾಲ್ಲೂಕುಗಳನ್ನು ಬೆಂಕಿರೋಗದ ಎಂಡಮಿಕ್ ಪ್ರದೇಶವೆಂದು ಹಾಗೂ ಈ ತಾಲ್ಲೂಕುಗಳ ಜೊತೆಗೆ ಶ್ರೀರಂಗಪಟ್ಟಣ ಮತ್ತು ಪಾಂಡವಪುರ ತಾಲ್ಲೂಕುಗಳನ್ನು ಕಂದುಜಿಗಿಹುಳು ಬಾಧೆಯ ಎಂಡಮಿಕ್ ಪ್ರದೇಶವೆಂದು ಗುರ್ತಿಸಲಾಗಿದೆ.

ವರದಿಗಳ ಆಧಾರದ ಮೇಲೆ ಜಿಲ್ಲೆಯಲ್ಲಿ ಕೀಟ ಹಾಗೂ ರೋಗಗಳ ಬಾಧೆಗೆ ತುತ್ತಾದ ಭತ್ತದ ಬೆಳೆಯ ವಿಸ್ತೀರ್ಣ ಈ ಕೆಳಕಂಡಂತಿದೆ

ಕ್ರ. ಸಂ.	ಕೀಟ : ರೋಗಗಳು	ಬಾಧೆಗೆ ತುತ್ತಾದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1.	ಕಂದು ಜಿಗಿ ಹುಳು (ಬಿಪಿಹೆಚ್)	1660
2.	ಬೆಂಕಿರೋಗ (ಬ್ಲಾಸ್ಟ್)	505
3.	ಮುಳ್ಳುಜಿಪನಹುಳು (ಹಿಸ್ಪ್)	600
		2765

ಸದರಿ ರೋಗ ಮತ್ತು ಕೀಟಗಳ ಬಾಧೆ ಭತ್ತದಲ್ಲಿ ಈ ಪ್ರದೇಶಗಳಲ್ಲಿ ಪ್ರತಿವರ್ಷ ತಪ್ಪದೆ ಕಾಣಿಸಿಕೊಳ್ಳುತ್ತಿದ್ದು ಮುಂಜಾಗ್ರತಾ ಕ್ರಮವಾಗಿ ಕೀಟ ಮತ್ತು ರೋಗಗಳ ಸಮೀಕ್ಷೆ ತಂಡವನ್ನು ಕೃಷಿ ವಿಶ್ವವಿದ್ಯಾಲಯದ ತಜ್ಞರು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ರಚಿಸಿ ಕಾಲಕಾಲಕ್ಕೆ ಸೂಕ್ತ ಸಮಯದಲ್ಲಿ ಸಮೀಕ್ಷೆಯನ್ನು ಕೈಗೊಂಡು ರೋಗ ಮತ್ತು ಕೀಟಗಳ ಆಯಾ ಹಂತದಲ್ಲಿ ಸೂಕ್ತವಾದ ವಿವಿಧ ನಿಯಂತ್ರಣ ಕ್ರಮಗಳನ್ನು ಸಮಗ್ರ ಪೀಡೆ ನಿರ್ವಹಣೆ ಪದ್ಧತಿ ರೀತ್ಯಾ ಕೈಗೊಳ್ಳಲಾಗಿರುತ್ತದೆ. ಈ

ದಿಶೆಯಲ್ಲಿ ರೈತರಿಗೆ ತಿಳುವಳಿಕೆಯನ್ನು, ನೀಡಿ ಸೇವೆಗಳ ನಿರ್ವಹಣೆಗಾಗಿ ಕಾರ್ಯಪ್ರವೃತ್ತರಾಗಲು ಇಲಾಖೆಯಿಂದ ಪ್ರಚೋದನೆ ಮಾಡಿ ರೋಗ ಮತ್ತು ಕೀಟಗಳನ್ನು ನಿಯ್ರಣದಲ್ಲಿಡಲು ಎಲ್ಲಾ ಕ್ರಮಗಳನ್ನು ಅಳವಡಿಸಲಾಗಿದೆ. ಮುಂದುವರಿದು ಶೇ.50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿ ಮತ್ತು ಉಪಕರಣಗಳನ್ನು ಸಹ ರೈತರಿಗೆ ಒದಗಿಸಲು 4.85 ಲಕ್ಷ ರೂಪಾಯಿಗಳ ಅನುದಾನವನ್ನೂ ಉಪಯೋಗಿಸಲಾಗಿರುತ್ತದೆ. ಭತ್ತದ ಬೆಳೆಯು ವಿವಿಧ ಹಂತದಲ್ಲಿದ್ದು ಈಗಾಗಲೇ ಪೂರ್ತಿ ಹಾಳಾದ ಬೆಳೆ ಬಾಧೆಗೆ ತುತ್ತಾದ ಪ್ರದೇಶ ಪೂರ್ವ ನಿಯಂತ್ರಣ ಮಾಡಿದಂತಹ ಪ್ರದೇಶಗಳ ಬಗ್ಗೆ ಕೂಲಂಕುಷವಾದ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಇನ್ನೂ ಬಾಧೆಗೆ ಒಳಗಾಗದೆ ಇದ್ದ ಪ್ರದೇಶಗಳಲ್ಲಿ ಚುರುಕಿನ ಸಸ್ಯ ಸಂರಕ್ಷಣಾ ಕ್ರಮಗಳನ್ನು ಅವಡಿಸುವಂತೆ ರೈತಾಪಿವರ್ಗಕ್ಕೆ ತಿಳುವಳಿಕೆ ನೀಡುವುದರ ಜೊತೆಗೆ ಇಂತಹ ಪ್ರದೇಶಗಳಲ್ಲಿ ನಿಗಾ ವಹಿಸಿ ಕಾರ್ಯನಿರ್ವಹಿಸಲು ಕ್ಷೇತ್ರ ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆ. ಭತ್ತದ ಮೇವಿನ ಉತ್ಪಾದನೆ ಅದರ ಕಟಾವಿನ ಹಂತದಲ್ಲಿನ ಪರಿಸ್ಥಿತಿಯನ್ನು ಅವಲಂಭಿಸಿರುತ್ತದೆ. ಕಾರಣ ಸಧ್ಯದ ಪರಿಸ್ಥಿತಿಯಲ್ಲಿ ಮೇವಿನ ಉತ್ಪಾದನೆಯಲ್ಲಿ ಕುಂಠಿತವಾಗಿರುವ ಪ್ರಮಾಣವನ್ನು ನಿಖರವಾಗಿ ಅಂದಾಜು ಮಾಡಲು ಅಸಾಧ್ಯವಾಗಿರುತ್ತದೆ. ಇದಲ್ಲದೆ ಬೆಳೆ ಹೂವು ಈ ಸಮೀಕ್ಷೆ ವರದಿಗಳನ್ನು ಸದ್ಯದಲ್ಲೇ ನಿರೀಕ್ಷಿಸಲಾಗಿದ್ದು ಈ ದಿಶೆಯಲ್ಲಿ ವರದಿಯ ಆಧಾರದ ಮೇಲೆ ಸರ್ಕಾರವು ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತದೆ.

+ಶ್ರೀ ಎಂ.ಎಸ್ ಆತ್ಮಾನಂದ (ಮಂಡ್ಯ):— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ 2765 ಹೆಕ್ಟೇರ್ ಪ್ರದೇಶ ಭತ್ತದ ಬೆಳೆ ಬಾಧೆಗೆ ಒಳಗಾಗಿರುವ ಪ್ರದೇಶವೆಂದು ತಿಳಿಸಿದ್ದಾರೆ. ಅದು ಬಹಳ ಉಳಿದ ಪ್ರದೇಶವನ್ನು ಆವರಿಸುತ್ತದೆ. ರೈತರಿಗೆ ಶೇಕಡಾ 50 ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿಯನ್ನು ಕೊಡುತ್ತಿದೇವೆಂದು ಹೇಳುತ್ತಿದ್ದಾರೆ. ರೈತನ ಬೆಬೆಯ ಬೆಂಬಲ ಬೆಲೆ ಕುಸಿತದ ಬಗ್ಗೆ ತೀವ್ರವಾದ ಚರ್ಚೆಯಾದ ಕಾಲದಲ್ಲಿ ರೈತರಿಗೆ ನೇರವಾಗುವ ರೀತಿಯಲ್ಲಿ ಪೂರ್ಣ ಪ್ರಮಾಣದಲ್ಲಿ 100 ಕ್ಕೆ 100ರಷ್ಟು ಸಸ್ಯ ಸಂರಕ್ಷಣೆ ಔಷಧಿಗಳನ್ನು ಹಾಗೂ ಉಪಕರಣಗಳನ್ನು ಕೊಡಬೇಕೆನ್ನುವ ಮಟ್ಟಿಗೆ, ಮಾನ್ಯ ಸಚಿವರು ತಿಳಿಸಿರುವ ಹಾಗೆ ಪ್ರತಿ ವರ್ಷ ನಮ್ಮ ಪ್ರದೇಶದಲ್ಲಿ ಈ ಬಾಧೆ ಕಾಣಿಸಿಕೊಳ್ಳುತ್ತದೆ. ಮುಂಜಾಗ್ರತೆಯ ಕ್ರಮವಾಗಿ ಶೀಘ್ರವಾಗಿ ಯಾವುದಾದರೂ ಒಂದು ಸಸ್ಯ ಸಂರಕ್ಷಣೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಕೃಷಿ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಭತ್ತದ ಮೇವಿಗೆ ಕೂಡ ತೊಂದರೆ ಇರುವುದರಿಂದ, ಜಾಮುವಾರುಗಳಿಗೆ ಒದಗಿಸುವುದು ಕಷ್ಟವಾಗಿ ಅದರ ಅಂದಾಜು ಮಾಡಲಿಕ್ಕಾಗುವುದಿಲ್ಲವೆಂದು ಹೇಳುತ್ತಾ, ಆ ಮೇವಿನ ಕೊರತೆಯನ್ನು ನಾವು ಎದುರಿಸುತ್ತಿದ್ದೇವೆ. ಭತ್ತದ ಬೆಳೆ ಹೋಗತಕ್ಕಂಥ ಕಾಲದಲ್ಲಿ ಕಂದು ಜಿಗಿ ಯಾವ ರೈತರ ಜಮೀನಿಗೆ ಆವರಿಸಿದೆ, ಅವರಿಗೆ ಸರ್ಕಾರದಿಂದ ಪರಿಹಾರವನ್ನು ಕೊಟ್ಟು ಅವರ ನೆರವಿಗೆ ಬರಬೇಕೆಂದು ಕೋಳಿಕೊಂಡು ಸಸ್ಯ ಸಂರಕ್ಷಣೆ ಕಾರ್ಯ ಕ್ರಮವನ್ನು ನಮ್ಮ ಜಿಲ್ಲೆಯಲ್ಲಿ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಕೃಷಿ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) :— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಪತ್ರಿಕೆಯಲ್ಲಿ ನೋಡಿದೆ, ಶಿವಮೊಗ್ಗ ಜಿಲ್ಲೆಯಲ್ಲಿ ಮಿಡಿತೆ ಹಾವಳಿಯಿಂದ ಅಡಿಕೆ, ತೆಂಗು, ಭತ್ತ ಹಾಳಾಗಿದೆ, ಹಿಂದೆ ಇದೇ ರೀತಿ ಚೈನಾ ದೇಶದಲ್ಲಿ ಆಗಿತ್ತು. ಅದೇ ಪರಿಸ್ಥಿತಿ ಶಿವಮೊಗ್ಗ ಜಿಲ್ಲೆಯಲ್ಲಿ ಬಂದಿದೆ ಎಂದು ನಾನು ನಿನ್ನೆ ಪತ್ರಿಕೆಯಲ್ಲಿ ಓದಿದೆ. ಅದರ ಬಗ್ಗೆ ಕೃಷಿ ಇಲಾಖೆಯವರು ಆದಷ್ಟು ಬೇಗನೆ ಮುಂಜಾಗ್ರತೆ ಕ್ರಮವನ್ನು ಜರುಗಿಸದೇ ಹೋದಕರೆ, ಒಂದು ದಿನಕ್ಕೆ ಮೂರು ನಾಲ್ಕು ಪಟ್ಟು ಈ ರೋಗ ಜಾಸ್ತಿಯಾಗುತ್ತದೆ. ಬೆಳೆಗಳ ಮೇಲೆ ಅದು ಒಂದು ದೊಡ್ಡ ಯುದ್ಧವನ್ನೆ ಮಾಡುತ್ತದೆ. ಇದರ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನಕ್ಕೆ ಬಂದಿದೆಯೇ ಎಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳಿತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಬಿದ್ದಿರುವ ಕಂದು ಜಿಗಿ ಹುಳುವಿನ ಬಾಧೆಯಿಂದ ಹಾಳಾಗಿರುವ ರೈತರ ಜಮೀನಿಗೆ ನಿನ್ನೆ ನಾನು ಅಧಿಕಾರಿಗಳ ಜೊತೆಯಲ್ಲಿ ಹೋಗಿ ಬಂದಿರುತ್ತೇನೆ. ಮಾನ್ಯ ಸದಸ್ಯರು ಹೇಳಿರುವ ಹಾಗೆ ಸಂಪೂರ್ಣವಾಗಿ ಬೆಳೆ ಹಾಳಾಗಿದೆ ಎಂದು ಹೇಳಿದ್ದಾರೆ ಅದನ್ನು ನಾನು ಕೂಡ ಒಪ್ಪುತ್ತೇನೆ. ನಾನು ಉತ್ತರ ಕೊಡುವ ಸಂದರ್ಭದಲ್ಲಿ ಇದೊಂದು ಎಂಡಮಿಕ್ ಒಂದು ಒಪ್ಪಿಕೊಂಡಿದ್ದೇನೆ. ಮಂಡ್ಯ "ವಿಜಯ" ಇರಬಹುದು, "ಜಯಾ ಭತ್ತ" ಇರಬಹುದು ಪರ್ಟಿಕ್ಯೂಲರ್ ಬೆಳೆ ಹಾಳಾಗಿದ್ದನ್ನು ನಾನು ನೋಡಿರುತ್ತೇನೆ. ಆದರೆ ಐ.ಆರ್.-64 ಹಾಕಿರುವ ಕಡೆ ಬೆಳೆ ಹಾಳಾಗಿರುವುದಿಲ್ಲ. ಅದು ಮುಖ್ಯವಾದದ್ದು, ನಾವು ವೆರೈಟಿಯನ್ನು ಬದಲಾವಣೆ ಮಾಡಬೇಕಾಗಿದೆ. ವಿಶ್ವವಿದ್ಯಾನಿಲಯದ ಒಂದು ಅಂಗ ಕೂಡ ತಮಗೆ ಗೊತ್ತಿರುವ ಹಾಗೆ ಅಲ್ಲಿಯೇ ಇದೆ. ಆ ವಿಜ್ಞಾನಿಗಳ ಜೊತೆಯಲ್ಲಿ ನಾವು ಚರ್ಚೆಯನ್ನು ಮಾಡಿ, ವೆರೈಟಿಯನ್ನು ಬದಲಾವಣೆ ಮಾಡಬೇಕೆಂದು ಮೊದಲನೆಯದಾಗಿ ತೀರ್ಮಾನ ಮಾಡಿದ್ದು, ಅದರ ಜೊತೆಗೆ ಈಗ ರೋಗ ಬರತಕ್ಕಂಥದ್ದಕ್ಕೆ ಕಾರಣವೇನೆಂದರೆ, ನಾವು ಯೂರಿಯಾ ಗೊಬ್ಬರಗಳನ್ನು ಉಪಯೋಗಿಸುತ್ತೇವೆ. ಯೂರಿಯಾ ಗೊಬ್ಬರವನ್ನು ಜಾಸ್ತಿಹಾಕುವುದರಿಂದ ನೈಟ್ರೋಜನ್ ಕಂಟೆಂಟ್ಸ್ ಜಾಸ್ತಿಯಾದಾಗ ಈ ರೀತಿಯಾದಂತಹ

12.40 ಪಿ.ಎಂ.

ರೋಬ್ಸ್ಟ್ (Robust) ಸ್ಟಾರ್ಟ್ ಆಗುವುದು ಸ್ವಾಭಾವಿಕವಾಗಿದೆ. ಈ ವರ್ಷ ಏನಾಯಿತೆಂದರೆ ಮಳೆ ಸ್ವಲ್ಪ ಜಾಸ್ತಿಯಾಗಿ ಮೋಡ ಕವಿದ ವಾತಾವರಣ ಇದ್ದ ಪರಿಣಾಮವಾಗಿ ಈ ರೋಗ ಹೆಚ್ಚಾಗಲು ಕಾರಣವಾಯಿತು. ಇದರ ಬಗ್ಗೆ ನಿಮಗೆ ಈಗಾಗಲೇ ಗೊತ್ತಾಗಿದೆ. ನಮ್ಮಲ್ಲಿ ಕೆಲವು ಪರ್ಟಿಕ್ಯುಲರ್ ವೆರೈಟಿಗಳಿಗೆ ಸೆನೆಪ್ಟಿಬಿಲಿಟಿ ಇದೆ ಎನ್ನತಕ್ಕಂಥದ್ದನ್ನು, ಆ ವೆರೈಟಿಯನ್ನು ಚೇಂಜ್ ಮಾಡುವುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ

ಬಹಳ ಮುಖ್ಯವಾಗಿ ಇಂಟಿಗ್ರೇಟೆಡ್ ವೆಸ್ಟ್ ಮ್ಯಾನೇಜ್‌ಮೆಂಟ್‌ನ್ನು ನಾವು ಈಗಾಗಲೇ ಇಲಾಖೆಯ ಮಟ್ಟದಲ್ಲಿ ಅದನ್ನು ಅಲಾಟ್ ಮಾಡಿದ್ದೇವೆ. ಇದರ ಜೊತೆಗೆ ಏನಾಗುತ್ತದೆಂದರೆ, ಎಂಡಮಿಕ್ ಎಂದಾದ ಮೇಲೆ ತಾವು ವಿಶೇಷ ಗಮನವನ್ನು ಸೆಳೆದು ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಈ ರೋಗವು ಕೇವಲ ಮಂಡ್ಯ ಮತ್ತು ಶಿವಮೊಗ್ಗಕ್ಕೆ ಮಾತ್ರ ಸೀಮಿತವಾಗಿರದೆ ಇದು ಎಲ್ಲಾ ಭಾಗದಲ್ಲಿಯೂ ಇದೆ. ನಾವು ಮುಂಜಾಗ್ರತೆಯ ಕ್ರಮವಾಗಿ ಇದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಸಾಕಷ್ಟು ಹಣವನ್ನು ಜಿಲ್ಲಾ ಪಂಚಾಯತ್ ಹಾಗೂ ಸರ್ಕಾರದಿಂದ ಬಿಡುಗಡೆ ಮಾಡಿ, ನಾವು ಕಂಟ್ರೋಲ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಇದಕ್ಕಿಂತಲೂ ಹೆಚ್ಚಾಗಿ ಮಾನ್ಯ ಸದಸ್ಯರಾದ ಶ್ರೀ ಕೆ. ಶ್ರೀನಿವಾಸಗೌಡರು ಹೇಳಿದರು. ದಿನದಿಂದ ದಿನಕ್ಕೆ ಹೊಸಹೊಸದಾಗಿ ರೋಗಗಳು ಕಾಣಿಸಿಕೊಂಡಂತಹ ಸಂದರ್ಭದಲ್ಲಿ ನಾವು ಒಂದು ಸರ್ವೇಲೆನ್ಸ್‌ನ್ನು ಮ್ಯಾನೇಜ್‌ಮೆಂಟ್‌ನ್ನು ಇದು ಕಟಾವು ಆದ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆಯೂ ಕೂಡ ಮಾಹಿತಿಯನ್ನು ತರಿಸಿಕೊಂಡು ಆಯಾಯ ಪ್ರದೇಶಕ್ಕೆ ಸೀಮಿತವಾಗಿರತಕ್ಕಂತಹ ರೋಗಗಳು ಯಾವುದು ಎಂಬುದನ್ನು ಐಡೆಂಟಿಫೈ ಮಾಡಿ, ಕೃಷಿ ವಿಜ್ಞಾನಿಗಳ ಜೊತೆಗೂಡಿ, ಇಲಾಖೆಯವರನ್ನು ಸಹ ಜೊತೆಗೂಡಿಸಿ ಒಂದು ಸರ್ವೇಲೆನ್ಸ್‌ನ್ನು ಮಾಡುತ್ತೇವೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ಅವಶ್ಯಕತೆ ಬಿದ್ದರೆ ನಾನು ನಿಮ್ಮ ಹತ್ತಿರ ಚರ್ಚೆ ಮಾಡುವುದಲ್ಲದೆ ಆಯಾ ಪ್ರದೇಶಕ್ಕೆ ಸಂಬಂಧಿಸಿ ಸೀಮಿತವಾಗುವಂತೆ ಕರಪತ್ರಗಳನ್ನು ಮುದ್ರಿಸಿ ಹಂಚಲು ಕ್ರಮವನ್ನು ಕೈಗೊಳ್ಳುತ್ತೇವೆ. ಅದರ ಜೊತೆಗೆ ಮುಂದೆ ಯಾವುದೇ ಭಾಗದಲ್ಲಿ ಯಾವ ತರಹದ ರೋಗಗಳು ಬರುತ್ತದೆ ಎಂಬುದರ ಬಗ್ಗೆ ಅಂಟಿಸಿಪೇಟ್ ಮಾಡತಕ್ಕಂಥದ್ದು ಕೂಡ ಅವಕಾಶವಿದೆ. ಇವೆಲ್ಲವನ್ನು ಕೂಡ ಸಮಗ್ರವಾಗಿ ಮಾಡುವುದರ ಮೂಲಕ ಆ ಪೀಡೆಯನ್ನು ನಿವಾರಣೆಯನ್ನು ಮಾಡುವಂತಹ ಕೆಲಸವನ್ನು ನಾನು ಸ್ಪಷ್ಟವಾಗಿ ಮಾಡುವುದಕ್ಕೆ ಸರ್ಕಾರವು ತೀರ್ಮಾನವನ್ನು ಮಾಡಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

ವಿಷಯ (ಅ) ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ನಿಗಮವು ರೋಗಗ್ರಸ್ಥವಾಗಿದ್ದು, ಅದನ್ನು ಪುನರುಜ್ಜೀವನಗೊಳಿಸುವ ಬಗ್ಗೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ನಿಗಮವು ರೋಗಗ್ರಸ್ಥವಾಗಿದ್ದು, ಅದನ್ನು ಪುನರುಜ್ಜೀವನಗೊಳಿಸುವ ಬಗ್ಗೆ ರೇಷ್ಮೆ ಮತ್ತು ಜವಳಿ ಸಚಿವರ ಗಮನವನ್ನು ನಾನು ಸೆಳೆಯುತ್ತೇನೆ.

+ ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿ ಕರ್ನಾಟಕ ರೇಷ್ಮೆ ಉದ್ಯಮಗಳ